**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು

ಸಿ.ಸಿ.ನಂ.**3260/2023**
ದಿನಾಂಕಃ **15.04.2025**

ಪಿರ್ಯಾದಿ ಃ ಶ್ರೀ ಬಿ.ಜಿ.ಶಂಕರ
ಬಿನ್ ಗುರುಬಸಪ್ಪ,
ಸುಮಾರು 58 ವರ್ಷ, ಹೋಟೆಲ್ ವ್ಯಾಪಾರ,
ವಾಸಃ ವೆಂಕಟೇಶ್ವರ ನಗರ, ಕಡೂರು ಟೌನ್,
ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ವಿರುದ್ಧ

ಆರೋಪಿ ಃ ಶ್ರೀ ವಿಜಯಕುಮಾರ ಕೆ.ಆರ್.
ಬಿನ್ ರಾಜು,
ಸುಮಾರು 33 ವರ್ಷ, ಹೋಟೆಲ್ ವ್ಯಾಪಾರ,
ವಾಸಃ ಆರ್.ವಿ.ಪಿ. ಕ್ಯಾಂಟೀನ್,
ಬಿ.ಹೆಚ್.ರಸ್ತೆ, ಕಡೂರು ಟೌನ್,
ಕಡೂರು ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

ಃಃ ಆಪಾದನೆಯ ಸಾರಾ ಃಃ

ಆರೋಪಿಯಾದ ನೀವು ನಿಮ್ಮ ವ್ಯವಹಾರದ ಹಾಗೂ ತುರ್ತು ಅವಶ್ಯಕತೆಗೋಸ್ಕರ ಫಿರ್ಯಾದುದಾರರಿಂದ 2023 ರ ಏಪ್ರಿಲ್ ಮೊದಲನೇ ವಾರದಲ್ಲಿ ರೂ.45,000/- ಹಣವನ್ನು ಸಾಲವಾಗಿ ಪಡೆದಿದ್ದು, ಸದರಿ ಹಣದ ಮರುಪಾವತಿಗಾಗಿ ಇಂಡಸ್‌ಲ್ಯಾಂಡ್ ಬ್ಯಾಂಕ್, ಶಂಕರ ನಗರ, ಬೆಂಗಳೂರು ಶಾಖೆಯ ಚೆಕ್ ಸಂಖ್ಯೆಃ 097067 ಅನ್ನು ರೂ.45,000/- ದಿನಾಂಕ 24.05.2023 ನ್ನು ನಮೂದಿಸಿ ಕೊಟ್ಟಿದ್ದು, ಅದನ್ನು ಫಿರ್ಯಾದುದಾರರು ಅವರ ಖಾತೆ ಇರುವ Equitas Small Finance Ltd, ಬೀರೂರು ಶಾಖೆಯ ಮೂಲಕ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ನಿಮ್ಮ ಖಾತೆಯಲ್ಲಿ **"Drawers signature differs"** ಎಂಬ ಕಾರಣಕ್ಕೆ ಸದರಿ ಚೆಕ್ ಅಮಾನ್ಯಗೊಂಡು ಬ್ಯಾಂಕಿನ ಹಿಂಬರಹದೊಂದಿಗೆ ದಿನಾಂಕ 31.05.2023 ರಂದು ವಾಪಾಸಾಗಿದ್ದು, ಈ ಬಗ್ಗೆ ಫಿರ್ಯಾದುದಾರರು ಅವರ ವಕೀಲರ ಮೂಲಕ ನಿಮಗೆ ದಿನಾಂಕ 19.06.2023 ರಂದು ನೋಟಿಸನ್ನು ಜಾರಿಗೊಳಿಸಿದ್ದು, ಸದರಿ ನೋಟಿಸು ನಿಮಗೆ ದಿನಾಂಕ 22.06.2023 ರಂದು

ಜಾರಿಯಾಗಿದ್ದು ನೀವು ಸುಳ್ಳು ಉತ್ತರವನ್ನು ನೀಡಿ ಚೆಕ್ಕಿನ ಹಣವನ್ನು ಮರುಪಾವತಿಸಿರುವುದಿಲ್ಲ, ಆದುದರಿಂದ ನೀವು ನೆಗೋಷಿಯೇಬಲ್ ಇನ್ಸ್ಟ್ರುಮೆಂಟ್ಸ್ ಕಾಯ್ದೆಯ ಕಲಂ **138** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

**1)** ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ**?**

ಉತ್ತರಃ ಹೌದು

**2)** ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪರವಾಗಿ ಪ್ರತಿರಕ್ಷೆ ಇದೆಯೇ**?**

ಉತ್ತರಃ ಪ್ರತಿರಕ್ಷೆ ಸಾಕ್ಷಿ ಇದೆ.

ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಸಹಿ/-
(ತಾಹಾಕಲೀಲ್ ಕೆ.ಎ.)
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.

ಆರೋಪಿ ಸಹಿಃ